ನಿರಾಕರಿಸಿದ್ದ ರಾವಣ ಸೀತೆಯ ಸೌಂದರ್ಯಕ್ಕೆ ಮಾರು ಹೋಗಿದ್ದಾನೆ. ಆ ಬಗೆಯನ್ನು ಕಂಡ ಕವಿಗೂ ವಿಷಾದವಿದೆ; ಜೊತೆಗೆ ಸಮರ್ಥನೆಯೂ ಇದೆ:

ವಿಹಿತಾಚಾರಮನನ್ವಯಾಗತ ಗುಣಪ್ರಖ್ಯಾತಿಯಂ ದುಷ್ಟನಿ
ಗ್ರಹಶಿಷ್ಟಪ್ರತಿಪಾಳನಕ್ಷಮತೆಯಂ ಕೈಗಾಯದನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ

ರಾವಣನಲ್ಲಿದ್ದ ಗುಣಗಳಿವು: ಯೋಗ್ಯವಾದ ನಡತೆ, ವಂಶಪಾರಂಪರ್ಯವಾದ ಗುಣಪ್ರಖ್ಯಾತಿ, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುವ ಸಾಮರ್ಥ್ಯ. ಇವುಗಳನ್ನು ಸಂರಕ್ಷಿಸಿಕೊಳ್ಳದೆ ಆತ ಪರಾಂಗನೆಯನ್ನು ಅಪೇಕ್ಷಿಸಿದನು. ಅದಕ್ಕೆ ಕಾರಣ – ವಿಧಿ! "ಅಬ್ಧಿಯುಮೊರ್ಮೆಕಾಲವಶದಿಂ ಮರ್ಯಾದೆಯಂ ದಾಂಟದೇ"! ಕೆಲವೊಮ್ಮೆ ಕಡಲೂ ಕೂಡ ತನ್ನ ಗಡಿಯನ್ನು ದಾಟುವುದಿಲ್ಲವೇ, ಹಾಗೆ! ಇದು ಉನ್ನತ ವ್ಯಕ್ತಿತ್ವವನ್ನು ಗಳಿಸಿಕೊಂಡು ಒಂದು ಗಳಿಗೆಯಲ್ಲಿ ಅಧೋಗತಿಗೆ ಇಳಿಯುವ ವಿಪರ್ಯಾಸ. ವಿಶಾಲವಾದುದೂ ಗಂಭೀರವಾದುದೂ ಕೂಡ ಕೆಲವೊಮ್ಮೆ ಗಳಿಸಿಕೊಂಡ ಮರ್ಯಾದೆಯನ್ನು ದಾಟಿಬಿಡುವ ಅಥವಾ ಅತಿಕ್ರಮಿಸುವ ಆಕಸ್ಮಿಕಗಳು ಸಂಭವಿಸುತ್ತದೆ. **'ಬಿದಿಯಂ ಮಿಾಱುಗುಮೆ ಪೆಱರ ಪೇೞ್ದುಪದೇಶಂ'** ಎಂದು ರಾವಣ ಅವಲೋಕಿನೀ ವಿದ್ಯೆಗೆ ಕೊಡುವ ಉತ್ತರದಲ್ಲೂ ಇದೇ ಅರ್ಥ ಹುದುಗಿದೆ. ಅಂದರೆ, ಶ್ರೇಷ್ಠವಾದದ್ದೂ ನಿರ್ಮೋಹದ ನೆಲೆಯನ್ನು ತಲುಪಬೇಕಾದರೆ ತನಗರಿವಿಲ್ಲದ ಒತ್ತಾಸೆಗೆ ಒಳಗಾಗುತ್ತದೆ ಎಂಬುದು ನಾಗಚಂದ್ರನ ನಿಲುವಾಗಿರಬೇಕು.

ಖರದೂಷಣನ ಮೇಲೆ ಯುದ್ಧವನ್ನು ಮಾಡಲು ಹೊರಟ ಲಕ್ಷ್ಮಣ, ಸೀತೆಯ ರಕ್ಷಣೆಗೆ ರಾಮನನ್ನು ನಿಯೋಜಿಸುತ್ತಾನೆ. ತನಗೆ ಯುದ್ಧದಲ್ಲಿ ವಿಪತ್ತು ಒದಗಿದರೆ ಸಿಂಹನಾದ ಮಾಡುವುದಾಗಿಯೂ, ಆಗ ನೀನು ನನ್ನ ಬೆಂಬಲಕ್ಕೆ ಬರಬೇಕೆಂದು ತಿಳಿಸುತ್ತಾನೆ. ಈ ಸಂಗತಿಯನ್ನು ಅರಿತ ರಾವಣ ಅವಲೋಕಿನಿ ವಿದ್ಯೆಗೆ ಸಿಂಹನಾದವನ್ನು ಮಾಡುವಂತೆ ಸೂಚಿಸುತ್ತಾನೆ. ಅದನ್ನು ಕೇಳಿದ ರಾಮ ಜಟಾಯುವನ್ನು ಕಾವಲಿಗೆ ನಿಲ್ಲಿಸಿ ಯುದ್ಧ ಭೂಮಿಗೆ ತೆರಳುತ್ತಾನೆ. ಅದೇ ವೇಳೆಗೆ ಸಂಚನ್ನು ರೂಪಿಸಿದ್ದ ರಾವಣ 'ಅಧೋಗತಿಗಿೞಿವುದನಭಿನಯಿಸುವಂತೆ' ಸೀತೆಯ ಬಳಿಗೆ ಬಂದಿಳಿಯುವುದನ್ನು ಕುರಿತು ಕವಿ ಹೀಗೆ ಹೇಳಿದ್ದಾನೆ: 'ಪೞಿಗಂ ಪಾಪಕ್ಕಮಂಜದವರೇಗಯ್ಯರ್': ನಿಂದೆಗೆ ಮತ್ತು ಪಾಪಕ್ಕೆ ಅಂಜದವರು ಏನು ಮಾಡಲೂ ಹಿಂಜರಿಯುವುದಿಲ್ಲ. 'ದೋಷಿ ಪಿಡಿವಂತೆ ದಿವ್ಯದ ಕಾಸಿದ ಕುಟಿವಂ' ಅಂದರೆ, ತಪ್ಪಿತಸ್ಥ ಪರೀಕ್ಷೆಯ ವೇಳೆ ಕಾದಿರುವ ಕಬ್ಬಿಣದ ಕುಳವನ್ನು ಹಿಡಿಯುವಂತೆ, ರಾವಣ ಸೀತೆಯನ್ನು ಹಿಡಿದು ಒಯ್ಯುವಾಗ ಆಜ್ಞಾಪಾಲಕನಾದ ಜಟಾಯು ಸೀತೆಯ ರಕ್ಷಣೆಗೆ ಮುಂದಾಗುತ್ತದೆ:

ಖರನಖರಂಗಳಿಂ ನಿಶಿತ ಚಂಚುಗಳಿಂದಿಱಿಯಲ್ಕಱುತ್ತುಸಾ
ರ್ತರೆ ನಸುನಕ್ಕು ಪೊಯ್ಯೆ ಕರದಿಂ ಗಮನೋತ್ಸುಕನಿಂದ್ರವೈರಿತ
ನ್ನೆರಡುಮೆಱಂಕೆಗಳ್ಮುಱಿದಿಳಾತದೊಳ್ಕೆಡೆದತ್ತು ವಜ್ರದಿಂ
ಸುರಪತಿ ಪೊಯ್ಯೆ ಬೆಟ್ಟು ಕೆಡೆವಂತೆ ಜಟಾಯು ನಭೋವಿಭಾಗದಿಂ

ಜಟಾಯು ತೀಕ್ಷ್ಣವಾದ ಕಾಲು ಉಗುರುಗಳಿಂದ, ಹರಿತವಾದ ಕೊಕ್ಕಿನಿಂದ ಇರಿಯಬೇಕೆಂದು